ಇ) ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕ 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಸ್.ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್ ಚುನಾವಣೆಗಳನ್ನು ವಿದ್ಯುನ್ಮಾನ ಯಂತ್ರಗಳ ಮೂಲಕ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಪುರಸಭೆಗಳು ಮತ್ತು ನಗರಸಭೆಗಳ ಚುನಾವಣೆಗಳನ್ನು ಕೂಡ ವಿದ್ಯುನ್ಮಾನ ಯಂತ್ರಗಳ ಮೂಲಕ ಚುನಾವಣೆ ಮಾಡಬೇಕೆಂದು ರಾಜ್ಯ ಚುನಾವಣಾ ಆಯೋಗ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಆ ರೀತಿ ಮಾಡಬೇಕೆಂದು ರಾಜ್ಯ ಚುನಾವಣಾ ಆಯೋಗ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಆ ರೀತಿ ಮಾಡಬೇಕೆಂದು ತಿಳಿಸಿದೆ. ಈ ರೀತಿ Electronic Voting Machine ಮಾಡುವುದರಿಂದ Ballet paperಗೆ ತಗಲುವ ವೆಚ್ಚ ಕಡಿಮೆಯಾಗುತ್ತದೆ. ಇದಕ್ಕಾಗಿ ಎಷ್ಟು ಮರಗಳು ಹೋಗುತ್ತವೋ, ಎಷ್ಟು ಕಾಡುಗಳು ಹೋಗುತ್ತವೋ ಗೊತ್ತಿಲ್ಲ. ಈ ಯಂತ್ರವನ್ನು ಬಳಸುವುದರಿಂದ ಮತ ಎಣಿಕೆ ಕೂಡ ಸುಲಭವಾಗುತ್ತದೆ. ಈ ದೃಷ್ಟಿಯಿಂದ ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಮತ್ತು ಕರ್ನಾಟಕ ಪೌರ ನಿಗಮಗಳ ಅಧಿನಿಯಮ ವೆಂದರೆ ಒಂದು ಪುರಸಭೆಗಳಿಗೆ ಇನ್ನೊಂದು ನಗರ ಸಭೆಗಳಿಗೆ 1976ಕ್ಕೆ ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಈ ತಿದ್ದುಪಡಿಗಳ ಮೂಲಕ ನಗರ ಸ್ಥಳೀಯ ಸಂಸ್ಥೆಗಳಿಗೆ ಇನ್ನು ಮುಂದೆ ನಡೆಯುವ ಚುನಾವಣೆಗಳಲ್ಲಿ ಮತ ಪತ್ರಗಳನ್ನು ಒಂದು provision ಇಟ್ಟುಕೊಂಡಿರುತ್ತೇವೆ ಮತ್ತೆ ಮತಯಂತ್ರಗಳ ಮೂಲಕ

ಚುನಾವಣೆಯನ್ನು ನಡೆಸುವುದಕ್ಕೆ ನಾವು ಇವತ್ತು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದೇವೆ. ಇದು ಕೂಡ ತುರ್ತು ಇತ್ತು, ಈಗ ಬರುವ ಕಾರ್ಪೊರೇಷನ್ ಚುನಾವಣೆಯ ಹಿನ್ನಲೆಯಲ್ಲಿ ಮಾನ್ಯ ರಾಜ್ಯಪಾಲರು ಇದನ್ನು ordinance ಮೂಲಕ ತಮ್ಮ ಅನುಮೋದನೆಯನ್ನು ಕೊಟ್ಟಿದ್ದರು. ಅದನ್ನು ಇಂದು ಸಭೆಯ ಮುಂದೆ ವಿಧೇಯಕವಾಗಿ ಪರಿವರ್ತಿಸಲು ತಾವು ಅನುಮೋದಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಇವರು ಬದಲಾವಣೆಯನ್ನು ತಂದಿರುವಂಥದ್ದು ಒಳ್ಳೆಯದೆ, ಆದರೆ ಒಂದು ಅನುಮಾನ ಬರುತ್ತಿದೆ. ಈ ವಿದ್ಯುನ್ಮಾನ ಯಂತ್ರ ಬಳಕೆ ಮಾಡುವುದರಿಂದ, ನಾನು ಮೊನ್ನೆ manipulationಗೂ ಕೂಡ ಅವಕಾಶವಿದೆಯೆಂಬುದನ್ನು ಟಿ.ವಿ.ಯಲ್ಲಿ ನೋಡಿದೆ. ಈ ರೀತಿ manipulation ಗೂ ಅವಕಾಶವಿದೆಯೆನ್ನುವಂಥ ರೀತಿಯಲ್ಲಿ ಬಂದಾಗ ಅದರ ಮೇಲೆ ವಿಶ್ವಾಸವೆನ್ನುವಂಥದ್ದು ಕಡಿಮೆಯಾಗುತ್ತದೆ. ಆ ಕಾರಣಕ್ಕೋಸ್ಕರ ಇವತ್ತು ಏನಾಗಿದೆಯೆಂದರೆ ನಮ್ಮಲ್ಲಿ software ಗಾಗಲಿ, technology ಗಾಗಲಿ, ಯಾವುದೇ ಕೊರತೆ ಇಲ್ಲ. ನೀವು ಈ ಮಿಷನ್‌ಗಳನ್ನು ಯಾವಾಗಲೋ ಒಂದು ಬಾರಿ ಅಂದರೆ ಐದು ವರ್ಷಗಳಿಗೊಂದು ಸಾರಿಯೋ, ಮೂರು ವರ್ಷಗಳಿಗೆ ಒಂದು ಸಾರಿ open ಮಾಡುವಂಥದ್ದು ಮತ್ತೆ ಕೆಟ್ಟಿರುವಂಥದ್ದು, maintain ಮಾಡದೇ ಇರುವಂಥ ದ್ದನ್ನೆಲ್ಲಾ ಇಟ್ಟು, ಅದು ಹೊಲಸಾಗುವುದು ಬೇಡ. ಅದಕ್ಕೋಸ್ಕರ technologyಯನ್ನು upgradation ಮಾಡುವುದರ ಬಗ್ಗೆ ಜನಗಳ ವಿಶ್ವಾಸವನ್ನು ಗಳಿಸುವಂಥ ರೀತಿಯಲ್ಲೂ ಕೂಡ ಇವತ್ತು ನಮ್ಮ ತಾಂತ್ರಿಕತೆಯು ಕೂಡ ಬದಲಾಗಬೇಕಾಗುತ್ತದೆ. ಅಂದರೆ ಜನಗಳಲ್ಲಿ ವಿಶ್ವಾಸ ಮೂಡಬೇಕಾದಾಗ, ಇರಬೇಕಾದಾಗ, ಆ technology upgradation ಬಗ್ಗೆ ಕೂಡ ಚಿಂತನೆ ಮಾಡಬೇಕು. ನಮ್ಮ ರಾಜ್ಯದಲ್ಲಿ ಏನಾಗಿದೆ? ನಮ್ಮ ದೇಶದಲ್ಲಿ ಏನಾಗಿದೆ? ಹೊರದೇಶಗಳಲ್ಲಿ ಏನಾಗಿದೆ? ಅಂಥಾದ್ದೆಲ್ಲವನ್ನು ನೋಡಿಕೊಂಡು ಮಾಡಬೇಕು. ಈಗ ಅಸೆಂಬ್ಲಿ, ಪಾರ್ಲಿಮೆಂಟ್, ಮತ್ತು ಸ್ಥಳೀಯ ಸಂಸ್ಥೆಗಳದೇ ಒಂದು wing ಮಾಡಿ upgradationಗೆ ವಿಶ್ವಾಸ ಬರುವಂಥ ರೀತಿಯಲ್ಲಿ ಮತ್ತು ಅದನ್ನು maintain ಮಾಡತಕ್ಕಂಥದ್ದರ ಬಗ್ಗೆಯೂ ಚಿಂತನೆ ಮಾಡಬೇಕೆಂದು ನನ್ನದು ಒಂದು ಸಲಹೆಯನ್ನು ಹೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು ಯಾರು ಹೇಳಲಿಲ್ಲ, ಬಿ.ಜೆ.ಪಿ.ಯ ನಾಯಕರು ಹೇಳಿರುವುದರಿಂದ ಅವರು ಹೇಳುವುದಕ್ಕೆ ಏಕೆ ಹಿಂದೇಟು ಹಾಕಿದರು? ಅವರು ಹೇಳಿರುವುದರಿಂದ ನಾವು ಹೇಳುತ್ತಿದ್ದೇವೆಯೇ ಹೊರತು ನಮ್ಮದೇನು ಇಲ್ಲ. ಇದನ್ನು ಮಾಡುವುದು ಸೂಕ್ತ, ಆದರೆ ಮಾನ್ಯ ಜಯಚಂದ್ರರವರು ಕೊಟ್ಟಿರುವ ಸಲಹೆಗಳನ್ನು ಸೇರಿಸಿಕೊಂಡು ಮಾಡಬೇಕೆಂದು ನನ್ನ ಭಾವನೆಯಾಗಿದೆ.

ಶ್ರೀ ಎಂ. ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಚಿಂತನೆ ಮಾಡಿರುವಂಥದ್ದು ಒಳ್ಳೆಯದು. ಆದರೆ ಮೊನ್ನೆ ಈ ಒಂದು ಓಟಿನ patronನಲ್ಲಿ ನಿವೃತ್ತ ಮುಖ್ಯ ಕಾರ್ಯದರ್ಶಿ, ದೆಹಲಿ, ಇವರು ಒಂದು ಸುದೀರ್ಘವಾದ ವರದಿಯನ್ನು election commissionಗೆ ಕೊಟ್ಟಿದ್ದಾರೆ. ನಾವು 5 ಓಟುಗಳನ್ನು ಮಾಡಿದರೆ 3ನೇ ಓಟನ್ನು ನಾವು ಯಾವ ಪಾರ್ಟಿಗೆ ಬೇಕಾದರೂ change ಮಾಡಿಕೊಳ್ಳಬಹುದೆಂಬುದನ್ನು practical ಮಾಡಿರುವಂಥದ್ದು, ಪತ್ರಿಕೆಗಳಲ್ಲೂ ಬಂದಿದೆ. ಅದರಲ್ಲೂ ವಿಶೇಷವಾಗಿ ಟಿ.ವಿ. ಮಾಧ್ಯಮದಲ್ಲಿ experiment ಎಲ್ಲಾ ಮಾಡಿ ತೋರಿಸಿದ್ದಾರೆ. ಅದನ್ನು ಅಳವಡಿಸಿದರೆ ಏನಾಗಬಹುದೆಂದು ಇದು ಇಲ್ಲಿಗೆ ಮಾತ್ರ ಸೀಮಿತವಲ್ಲ. ಈ ರಾಜ್ಯದ, ಈ ರಾಷ್ಟ್ರದ, ಎಲ್ಲಾ ಕಡೆಗಳಲ್ಲೂ ಚುನಾವಣೆಗಳ ಮೇಲೆ ದುಷ್ಪರಿಣಾಮವಾಗುತ್ತದೆ. ಇದರ ಬಗ್ಗೆ ಏನಾದರೂ prevent ಮಾಡುವ ಚಿಂತನೆ ಇದೆಯಾ? Chief Election Commissioner ರವರು ಸಹ ಇದರ ಬಗ್ಗೆ ಒಂದು ಸಲಹೆಯನ್ನು ನೀಡಿದರು. ಇದನ್ನು ಸುದೀರ್ಘವಾಗಿ enquiry ಮಾಡುತ್ತೇನೆಂದು, ಏಕೆಂದರೆ ಎಲ್ಲೋ ಒಂದು ಕಡೆ ಆಡಳಿತ ಪಕ್ಷಗಳು ಅದು ರಾಜ್ಯ ಆಗಲಿ, ರಾಷ್ಟ್ರವಾಗಲಿ ಎಲ್ಲೇ ಆಗಲಿ ಆ software ಅನ್ನು ಬದಲಾವಣೆ ಮಾಡಿಕೊಂಡು ಬಿಟ್ಟರೆ ಚುನಾವಣಾ ಮೌಲ್ಯ ಕುಸಿದು ಹೋಗುತ್ತದೆ. ಆ ನಿಟ್ಟಿನಲ್ಲಿ ಏನು ಚಿಂತನೆಯನ್ನು ಮಾಡಿದ್ದೀರೆಂಬ ವಿಷಯವನ್ನು ಮಾನ್ಯ ಸಚಿವರು ಹೇಳಬೇಕು. ಇದರ ಜೊತೆಗೆ ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಚಾರವಲ್ಲ. ಇದು ಚುನಾವಣಾ ಕಮೀಷನ್‌ಗೆ ಸಂಬಂಧಪಟ್ಟ ವಿಷಯ. ಈ ವಿಷಯವಾಗಿ ನಾಲ್ಕಾರು ಬಾರಿ ಪತ್ರಿಕೆಗಳಲ್ಲಿ ಬಂದಿದೆ. ಇದಕ್ಕೆ ಒಂದು enquiry commission ಅನ್ನು ಮಾಡುತ್ತೇವೆಂದು Chief Election Commissioner Delhi, ಇವರು ಹೇಳಿದ್ದಾರೆ. ಅದರ ಬಗ್ಗೆ ಏನಾದರೂ

ಮಾಹಿತಿ ಇದ್ದರೆ ಮಾನ್ಯ ಸಚಿವರು ಸಭೆಗೆ ತಿಳಿಸಬೇಕೆಂದು ವಿನಂತಿಸಿ ಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಇದಕ್ಕೆ Expenditure 11 ಕೋಟಿ ರೂಪಾಯಿಗಳು ಹೇಗೆ ಬೇಕಾಗುತ್ತದೆ. ನಾನು ಇದನ್ನು ಈಗ ನೋಡಿದೆ, I am really surprised.

ಶ್ರೀ ಎಸ್.ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ರೇವಣ್ಣನವರು ಒಂದು ಬಹಳ ಪ್ರಮುಖವಾದ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಅದರಲ್ಲೂ ವಿಶೇಷವಾಗಿ Electronic Voting Machine ಬಗ್ಗೆ ಇತ್ತೀಚೆಗೆ ಬಂದಿರುವಂಥ ಕೆಲವು ಅಭಿಪ್ರಾಯಗಳು, ಸಾರ್ವಜನಿಕವಾಗಿ ನಡೆಯುತ್ತಿರುವಂಥ ಚರ್ಚೆ ಹಾಗೂ ಮಾನ್ಯ ಕೃಷ್ಣಪ್ಪನವರು ಕೂಡ ತಮ್ಮ apprehensionನ್ನು ವ್ಯಕ್ತಪಡಿಸಿದ್ದಾರೆ. ನಾವೆಲ್ಲರೂ ಕೂಡ ಮುಕ್ತವಾದ ಚುನಾವಣೆಯನ್ನು ಬಯಸುವವರು. ದೇಶದಲ್ಲಿ ಜನತೆಗೆ ಅವರಿಗೆ ಬೇಕಾದ ಅಭಿಪ್ರಾಯದ ಮೂಲಕ ಒಂದು ಸರ್ಕಾರ, ಒಂದು ವ್ಯವಸ್ಥೆ ಬರಬೇಕೆಂದು ಇದೆ. ಮಾನ್ಯ ಜಯಚಂದ್ರರವರೆ, 15–20 ವರ್ಷಗಳ ಹಿಂದೆ ನಡೆಯುತಿದ್ದಂಥ ಚುನಾವಣೆಗಳಿಗೆ ಇವತ್ತು ಹೊಲಿಸಿದರೆ ಜನರಿಗೆ ಚುನಾವಣಾ ಆಯೋಗದ ಮೇಲೆ ವಿಶ್ವಾಸ ಹೆಚ್ಚಾಗಿದೆ. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದು ಬಿಹಾರ್ ರಾಜ್ಯದಲ್ಲಿ ನಡೆದಿರುವ ಚುನಾವಣೆ ಇರಬಹುದು, ಯು. ಪಿ. ಚುನಾವಣೆ ಇರಬಹುದು. ಎಲ್ಲಾ ಕಡೆಗಳಲ್ಲೂ ಇವತ್ತು ಚುನಾವಣೆ ಚೆನ್ನಾಗಿ ನಡೆದಿದೆ. ಮೊದಲು ಚುನಾವಣೆ ಆದ ಮಾರನೇ ದಿವಸ ನಾವು ನೋಡುತ್ತಾ ಇದ್ದಿದ್ದು ಎಷ್ಟು percentage ಎನ್ನುವುದಕ್ಕಿಂತ ಎಷ್ಟು ಕಡೆ booth capture ಆಯಿತೆಂದು, ಎಷ್ಟು ಕಡೆಗಳಲ್ಲಿ ನಕಲಿ ಮತದಾನ ಆಯಿತೆಂಬುದನ್ನು, ಎಷ್ಟು ಕಡೆಗಳಲ್ಲಿ re-polling ಆಯಿತೆಂಬುದನ್ನು ಚರ್ಚೆ ಮಾಡುತ್ತಿದ್ದೆವು. ಇವತ್ತು ಆ ವ್ಯವಸ್ಥೆಯನ್ನು ದಾಟಿ ಮುಂದೆ ಬಂದಿದ್ದೇವೆ & Electronic Voting Machine ಇವತ್ತು in general ಒಂದು accepted, ಒಂದು ವ್ಯವಸ್ಥೆ ಮತ್ತೆ ಬಹಳ fair & free ಇರುತ್ತದೆ.

(11-30 AM)

ಇದು ನಿಜವಾಗಿಯೂ ಕೂಡ ಜನರ ಅಭಿಪ್ರಾಯವನ್ನು ವ್ಯಕ್ತ ಮಾಡುತ್ತದೆ ಎಂದು ಸಾರ್ವತ್ರಿಕವಾದ ಅಭಿಪ್ರಾಯವಿದೆ. It is the accepted policy of the Election Commission. ಈಗ ಎರಡು ಮೂರು

ವಿಚಾರಗಳನ್ನು ಹೇಳಿದ್ದಾರೆ. ಯಾವುದೇ system ಅನ್ನು ನಾವು ನಿರಂತರವಾಗಿ fool proof ಮಾಡುವುದಕ್ಕೆ, tamper free ಮಾಡಲಿಕ್ಕೆ ಪ್ರಯತ್ನವನ್ನು ಮಾಡುತ್ತಲೇ ಇರಬೇಕು, ಇದು ನಿಲ್ಲುವುದಿಲ್ಲ. ಮೊನ್ನೆ ನನಗೆ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಒಂದು ಘಟನೆಯನ್ನು ಹೇಳಿದರು. Corporate Hospitalಗಳಲ್ಲಿ ಕೊಡುವ ಎಲ್ಲಾ medicines ಅನ್ನು, ಯಾವ ಟೈಮಿಗೆ ಯಾವ medicine ಕೊಡಬೇಕು ಎನ್ನುವುದನ್ನು computerize ಮಾಡಿರುತ್ತಾರೆ. ಅದನ್ನು ನೋಡಿ ಅದರ ಪ್ರಕಾರ ಮಾಡುತ್ತಾರೆ. ಅದನ್ನು ಯಾರೋ ಅಮೇರಿಕಾದಲ್ಲಿ ಕುಳಿತುಕೊಂಡು ಇಲ್ಲಿನ ಆಸ್ಪತ್ರೆಯ software ಅನ್ನು hack ಮಾಡಿ, ಯಾವ ರೀತಿ ಬದಲಾಯಿಸಿದ, ಅದರಿಂದ ಒಬ್ಬ ತೀರಿಹೋದ ಎನ್ನುವ ಮಾರ್ಮಿಕವಾದ ಒಂದು ಕಥೆಯನ್ನು ಹೇಳಿದರು. ಈ ರೀತಿಯ ವ್ಯಕ್ತಿಗಳು ಇದ್ದಾರೆ, ಈ ರೀತಿಯ ಮನಸ್ಸುಗಳು ಇವತ್ತು ಇವೆ. ಆದ್ದರಿಂದ, ನೀವೆಲ್ಲ ಹೇಳಿದ ಹಾಗೆ ನಾವು ಎಚ್ಚರಿಕೆಯನ್ನು ವಹಿಸಬೇಕು. ಈ ವ್ಯವಸ್ಥೆಯಲ್ಲಿ ಅಕಸ್ಮಾತ್ ಲೋಪವಿದ್ದರೆ, ಅದನ್ನು ಸರಿಪಡಿಸಿ, ಜನರ ಅಭಿಪ್ರಾಯಕ್ಕೆ ಭಂಗ ಬರದ ಹಾಗೆ, electronic voting machine tamper ಆಗದ ಹಾಗೆ ಇನ್ನಷ್ಟು ಭದ್ರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ನನ್ನ ಈ ಅನುಭವದ ಮೇಲೆ, ನಮ್ಮ ವಿಜ್ಞಾನಿಗಳು ಮತ್ತು ನಮ್ಮ ಚುನಾವಣಾ ಆಯೋಗ ಮಾಡುತ್ತದೆ ಎನ್ನುವ ವಿಶ್ವಾಸವನ್ನು ಕೊಡುತ್ತೇನೆ. ಇನ್ನು, ಎಷ್ಟು ರೇಟ್ ಆಗುತ್ತದೆ ಎಂದು ತಾವು ಕೇಳಿದಿರಿ. ಒಂದು electronic voting machineಗೆ 10,000 ರೂಪಾಯಿ. ನಮಗೆ ಒಟ್ಟು ಬೇಕಾಗಿರುವುದು ಏಳೂವರೆ ಸಾವಿರ machines ಇದರ ಜೊತೆಗೆ, ಅದನ್ನು install ಮಾಡುವುದಕ್ಕೆ ನಮಗೆ ಬೇಕಾಗಿರುವ additional expenses 4,000 ರೂಪಾಯಿ. ಹಾಗಾಗಿ ಒಂದು machine install ಮಾಡಲು ನಮಗೆ ಒಟ್ಟು ಹನ್ನೊಂದೂವರೆ ಸಾವಿರ ರೂಪಾಯಿಗಳು ಬೇಕು. ಅದಕ್ಕೋಸ್ಕರ ಇದೆಲ್ಲವನ್ನೂ ಲೆಕ್ಕ ಹಾಕಿ ಇಷ್ಟು ಹಣ ಬೇಕೆಂದು ಹೇಳಿದ್ದೇವೆ. ರಾಜ್ಯದ assembly, parliament ಮತ್ತು ಸ್ಥಳೀಯ ಸಂಸ್ಥೆಗಳ electionಗಳು ಒಟ್ಟಿಗೆ ನಡೆದರೆ ನಮ್ಮ ಹತ್ತಿರ spare machines ಇರಬೇಕು ಎಂದು ನಾವು ಲೆಕ್ಕ ಹಾಕಿ B.E.L. ನಿಂದ quotation ತೆಗೆದುಕೊಂಡು ನಾವು ಮಾಡುತ್ತಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಲೋಕಸಭೆ ಮತ್ತು ವಿಧಾನಸಭೆಗಳಿಗೆ ಈಗಾಗಲೇ electronic voting machines ಇವೆ. ಅವುಗಳಿದ್ದರೂ ಹೇಗೆ shortage ಆಗುತ್ತದೆ ಎನ್ನುವುದಕ್ಕೆ ಉತ್ತರ ಬೇಕು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4 ರವರೆಗೆ

ಅಧ್ಯಕ್ಷರು : "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ರ ಕರ್ನಾಟಕ ಪೌರಸಭೆಗಳ ಕಾನೂನು ಹಾಗೂ ಇನ್ನೊಂದು ಕಾನೂನಿನ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–3)

ಈ) ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ, 2009 ಪರ್ಯಾಲೋಚನಾ ಪ್ರಸ್ತಾವ

ಶ್ರೀ ವಿ. ಎಸ್. ಆಚಾರ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಾಗರೀಕ ಸಮಾಜದಲ್ಲಿ ಪ್ರಮುಖವಾದಂಥ ಸೇವೆಗಳು, ಸೌಲಭ್ಯಗಳು ಸುಲಲಿತವಾಗಿ ನಡೆಯಬೇಕಾದರೆ ಅದಕ್ಕೆ ಏನಾದರೂ ಒಂದು ಬಗೆಯ ನಿಯಂತ್ರಣ ಬೇಕು ಎನ್ನುವ ದೃಷ್ಟಿಯಿಂದ ಈ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ನಾವು ಇಲ್ಲಿ ತಂದಿದ್ದೇವೆ. ಇದು ಹೊಸದೇನೂ ಅಲ್ಲ, ಹಿಂದೆಯೂ ನಮ್ಮ ರಾಜ್ಯದಲ್ಲಿ ಜಾರಿಯಲ್ಲಿತ್ತು. ಆದರೆ ಅದರ ಅವಧಿ *built*